† SRI DHARM SINGH.—[on behelf of Sri M. M. J. Sadyojatha (Minister for Transport and Minor Irrigation] Sir, the total water-spread area is 852 acres. I do not have the details about the present water spread area.

SRI C. M. ARUMUGHAM.—Sir, according to my information nearly 122 persons have encroached the tank-bed area. May I know the extent of area encroached by these persons ?

SRI DHARM SINGH.—According to the information. 173 persons have encroached the area to the extent of 66 acres.

SRI C. M. ARUMUGHAM.—How long they are in possession of these lands ?

SRI DHARM SINGH.—We have taken action to evict these encroachers. The Deputy Commissioners has already taken possession of 6 acres and the remaining 60 acres will be taken possession of by the Government. I have contacted the Revenue Minister and the Revenue Commissioner in this regard. They agreed to initiate action immediately to start eviction proceedings in this behalf.

SRI C. M. ARUMUGHAM.—Are the Government aware that these encroachers have constructed 27 wells on these lands ? If so, what action the Government propose to take against them.

SRI DHARM SINGH.—As the lands come under the control of Water Supply Board we will take over all those wells.

SRI C. M. ARUMUGHAM.—Sir, the K.G.F. town and the B.E.M.L. township is getting water from this reservoir. This is the only source for supply of drinking water to these areas. Formerly we were getting 1,86,000 gallons of water from this reservoir. Now, due to this encroachment we are getting 1 lakh gallons, thus the people are not getting adequate supply of drinking water. Therefore, I would like to know what action Government propose to increase the quantum of supply of drinking water and how long the Government would take to evict these encroachers from that area ?

SRI DHARM SINGH.—The Karnataka Water Supply and Sewerage Board has prepared a scheme. As already mentioned the revenue authorites will take action to evict these persons. Soon after this, action will be taken to restore more drinking water to these areas.

Taking over the Municipal College to Government

731 SRI H. M. MALLIKARJUNAPPA (Tarikere).—Will the Minister for Education be pleased to state.—

(*a*) the year in which the Junior College, Tarikere was handed over by the Tarikere Municipality to the Government ;

(*b*) whether the said College building has been repaired.

(*c*) whether it is a fact that the Deputy Director of Public Instructions, Chickmagalur has reported to Government for the repairs of the said school and college buildings ?

SRI G. B. SHANKAR RAO.—(Minist r for Education.)—

(*a*) The Government have taken over the Junior College from the Municipality in the year 1973.

(*b*) No

(*c*) Yes.

ಶ್ರೀ ಹೆಚ್.ಎಂ. ಮಲ್ಲಿಕಾರ್ಜುನಪ್ಪ.—ತರೀಕೆರೆ ಜೂನಿಯರ್ ಕಾಲೇಜನ್ನು ಪುರಸಭೆಯವರು ೧೯೭೩ರಲ್ಲಿ ಸರ್ಕಾರಕ್ಕೆ ವಹಿಸಕೊಟ್ಟಿದ್ದು, ಆಲ್ಲಿಂದ ಅದರ ದುರಸ್ತಿ ಮಾಡಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕಳೆದ ಎಂಟು ವರ್ಷಗಳಿಂದ ಏತಕ್ಕೆ ದುರಸ್ತಿ ಮಾಡಲಿಲ್ಲ.

† ಶ್ರೀ ಜಿ.ಬಿ. ಶಂಕರರಾವ್.—ದುರಸ್ತಿ ಮಾಡುವುದು ಕಾಮಗಿರಿ ಇಲಾಖೆಗೆ ಸೇರಿದ್ದು. ಶಾಲೆಯನ್ನು ಸರ್ಕಾರದ ವಶಕ್ಕೆ ತೆಗೆದುಕೋಡ ಮೇಲೆ ಅದನ್ನು ದುರಸ್ತು ಮಾಡಲು ಕಾಮಗಾರಿಕೆ ಇಲಾಖೆಗೆ ವಹಿಸುತ್ತೇವೆ. ಕಟ್ಟಡವನ್ನು ದುರಸ್ತು ಮಾಡಬೇಕೆಂದು ಕಾಮಗಿರಿ ಇಲಾಖೆಗೆ ಬರೆದಿದ್ದೇವೆ. ದುರಸ್ತು ಕಾರ್ಯ ಪ್ರಾರಂಭ ಮಾಡುವ ಮುನ್ನ. ಕಟ್ಟಡ ಯಾವ ಕಾಲದಲ್ಲಿ ಕಟ್ಟಿದ್ದು, ಅದರ percent age of depreciation ಎಷ್ಟು ಮತ್ತು ಈಗ ಅದಕ್ಕೆ ಎಷ್ಟು ಬೆಲೆ ಇದೆ ಎನ್ನುವುದನೆಲ್ಲ ಲೆಕ್ಕಹಾಕಿ ನಂತರ ಅವರು ದುರಸ್ತು ಕಾರ್ಯ ಪ್ರಾರಂಭಮಾಡುತ್ತಾರೆ.

ಶ್ರೀ ಹೆಚ್.ಎಂ. ಮಲ್ಲಿಕಾರ್ಜುನಪ್ಪ.—ಕಳೆದ ಎಂಟು ವರ್ಷಗಳಿಂದಲೂ ಆ ಮಾಹಿತಿಯನ್ನು ಅವರು ಪಡೆದಿಲ್ಲವೆ?

ಶ್ರೀ ಜಿ.ಬಿ. ಶಂಕರರಾವ್.—ಆ ಕಾಲೇಜು ಮತ್ತು ಕಾಲೇಜುಕಟ್ಟಡವನ್ನು ಶಿಕ್ಷಣ ವಹಿಸಿಕೊಂಡಿದೆ ಕಟ್ಟಡದ ದುರಸ್ತು ಕಾರ್ಯವನ್ನು ಕಾಮಗಾರಿ ಇಲಾಖೆಯವರು ಮಾಡಬೇಕಾಗುತ್ತದೆ. ಆ ಬಗ್ಗೆ ನಮ್ಮ ಇಲಾಖೆಯಲ್ಲಿ ಆದೇಶವಾಗಬೇಕು ಮತ್ತು ಅವರು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಶಿಕ್ಷಣ ಇಲಾಖೆ ವಹಿಸಿಕೊಂಡಿರುವುದು ಇದೊಂದೇ ಕಾಲೇಜನಲ್ಲ. ಸುಮಾರು ೪೫೭ ಶಾಲೆಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಮುನಿಸಿಪಾಲಿಟಿಗಳಿಂದ ಶಿಕ್ಷಣ ಇಲಾಖೆ ವಹಿಸಿಕೊಂಡಿದೆ. ಆಲ್ಲದೆ, ಆ ಕಟ್ಟಡ ಯಾವ ವರ್ಷ ಕಟ್ಟಲ್ಪಟ್ಟಿತು, ಆಗ ಅದಕ್ಕಾದ ಖರ್ಚೆಷ್ಟು, depreciation value ಏನು, ಮತ್ತು ಸದ್ಯದ ಅದರ ಬೆಲೆ ಏನೆಂಬುದನ್ನೆಲ್ಲ ನಿಗದಿ ಮಾಡಬೇಕಾಗಿರುವುದರಿಂದ ಸ್ವಲ್ಪ ನಿಧಾನವಾಗಿದೆ. ಈ ಕೆಲಸಗಳೆಲ್ಲ ಪೂರ್ತಿಯಾದ ಮೇಲೆ, ಆದನ್ನು ನಾವು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡುತ್ತೇವೆ, ನಂತರ ಅವರು ದುರಸ್ತು ಮಾಡುತ್ತಾರೆ, ಈಗ ಅದಕ್ಕೆ ಒಂದು ಅಂದಾಜು ತಯಾರಾಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯ ಶ್ರೀ ಮಲ್ಲಿಕಾರ್ಜುನಪ್ಪನವರ ಸ್ಥಾನಪಲ್ಲಟ ಯಾವಾಗಿ ಆಯಿತು? ನೋಟಿಸ್‌ನಲ್ಲಿ ಶ್ರೀ ಮಲ್ಲಿಕಾರ್ಜುನಪ್ಪನವರ ಸಸರಿನ ಮುಂದೆ Minister for Education ಎಂದು ಆಚ್ಚಾಗಿದೆ!

(ನಗು)

ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಕಾಲೇಜನ್ನು ವಹಿಸಿಕೊಂಡಿದೆ, ಕಳೆದ ಎಂಟು ವರ್ಷಗಳಿಂದ ಈ ಕಟ್ಟಡದ ದುರಸ್ತಿಯಾಗಿಲ್ಲ, ದುರಸ್ತಿ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯವರು ಮಾಡಬೇಕೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಕಾಮಗಾರಿ ಇಲಾಖೆಯವರು ಆದಿನ್ನೂ ನಮಗೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಆ ಕಟ್ಟಡ ಯಾವ ಸ್ಥಿತಿಯಲ್ಲಿದೆ ಎಂಬುದು ತಮಗೆ ಗೊತ್ತಿದೆ. ಕಳೆದು ಎಂಟು ವರ್ಷಗಳಿಂದಲೂ ಆ ಕಟ್ಟಡದ ದುರಸ್ತಿಯಾಗಿಲ್ಲವೆಂದರೆ, ಆದು ಪೂರ್ತ ಬಿದ್ದು ಹೋದ ಮೇಲೆ ದುರಸ್ತು ಮಾಡಿಸುತ್ತೀರೇನು? ಅಥವಾ ಹೊಸ ಕಟ್ಟಡವನ್ನೆ ಕಟ್ಟಿಸಬೇಕೆಂದು ತೀರ್ಮಾನ ಮಾಡಿದ್ದೀರಾ?

ಶ್ರೀ ಜಿ.ಬಿ. ಶಂಕರರಾವ್.—ಎಂಟು ವರ್ಷಗಳಿಂದಲೂ ಅದು ದುರಸ್ತಿಗೆ ಬಂದಿಲ್ಲ. ಅದನ್ನು ಸರ್ಕಾರ ವಹಿಸಿಕೊಂಡು ಎಂಟು ವರ್ಷಗಳಾಯಿತು, ಆಷ್ಟೆ. ಇತ್ತೀಚೆಗೆ ಅದು ದುರಸ್ತಿಗೆ ಬಂದಿದೆ. ಅದನ್ನು ದುರಸ್ತು ಮಾಡಬೇಕಾದರೆ, ಕಾಮಗಾರಿ ಇಲಾಖೆಗೆ ವಹಿಸಿಕೊಡಬೇಕು. ಇಂತಹ ಐನೂರು ಕಟ್ಟಡಗಳನ್ನು ದುರಸ್ತು ಕಾರ್ಯಗಳಿಗಾಗಿ ಕಾಮಗಾರಿ ಇಲಾಖೆಗೆ ವಹಿಸಿಕೊಡಬೇಕಾಗಿದೆ. ಆ ಕೆಲಸವಷ್ಟು ಕಷ್ಟಕರವೆಂದು ನಾನು ಈಗಾಗಲೇ ಹೇಳಿದ್ದೇನೆ. ಆ ಕಟ್ಟಡ ಎಂಟು ವರ್ಷಗಳಿಂದ ದುರಸ್ತಿಗೆ ಬಂದಿಲ್ಲ, ಜಾಗ್ರತೆ ಆ ಕೆಲಸ ಪೂರೈಸುತ್ತೇವೆ.

ಶ್ರೀ ಹೆಚ್ ಎಂ. ಮಲ್ಲಿಕಾರ್ಜುನಪ್ಪ.–ಡಿ.ಡಿ.ಪಿ.ಐ.ರವರಿಂದ ಏನು ವರದಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಡಿ.ಡಿ.ಪಿ.ಎ.ರವರನ್ನು ವರದಿ ಕೇಳಿದ್ದೇವು. ಅವರು, ೫೨,೫೦೦ ರೂಪಾಯಿ ಅಂದಾಜು ಮಾಡಿ ಕಳುಹಿಸಿದ್ದಾರೆ.

ಶ್ರೀ ಹೆಚ್.ಎಂ. ಮಲ್ಲಿಕಾರ್ಜುನಪ್ಪ.—ಈ ವರ್ಷವಾದರೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಕಾಮಗಾರಿ ಇಲಾಖೆ ವಹಿಸಿಕೊಂಡಮೇಲೆ ಹಣದ ಅವಶ್ಯಕತೆ ನೋಡಿಕೊಂಡು ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎ. ಮೊಹಿದ್ದೀನ್.—ಬಂಟ್ವಾಳ ತಾಲ್ಲೂಕಿನಲ್ಲಿ ಕಳೆದ ೧೦ ವರ್ಷಗಳಿಂದ ಶಾಲಾಕಟ್ಟಡಗಳ ರಿಪೇರಿ ಕೆಲಸವನ್ನು ಮಾಡಿಲ್ಲ. ಇವತ್ತು ಶಾಲಾಕಟ್ಟಡಗಳು ಬಿದ್ದುಹೋಗತಕ್ಕ ಪರಿಸ್ಥಿತಿಯಲ್ಲಿವೆ? ಶಾಲೆಗಳಲ್ಲಿ ಕೂಡೆ ಹಿಡಿದುಕೊಂಡು ಪಾಠಪ್ರವಚನ ಮಾಡುತ್ತಿದ್ದಾರೆ: ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟರೆ ಸಾಲದು, ಹಣವನ್ನು ಒದಗಿಸಬೇಕು. ಇವತ್ತು ಗ್ರಾಮದಲ್ಲಿರತಕ್ಕ ಜನರು ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ಖರ್ಚುಮಾಡಿ ಕಟ್ಟಿಸಿ ಕಟ್ಟಿಸುತ್ತೇವೆ, ಅದನ್ನು ರಿಪೇರಿ ವೈಗರೆ ಮಾಡದೇ ಜೋಪಾನವಾಗಿವೆ ಎಂದು ಅಂದುಕೊಳ್ಳುತ್ತಿದ್ದಾರೆ. It is a veey small thing. You must set it right. It is very small issue for you. Pl ease tell us, when you are going to set these things right? Whether before the on set of monsoon?

ಶ್ರೀ ಜಿ.ಬಿ. ಶಂಕರ್‌ರಾವ್.—ಸ್ವಾಮಿ, ಇದು ಸಣ್ಣ ಸಮಸ್ಯೆಯಲ್ಲ, ಇವರು ಬಂಟ್ವಾಳ ತಾಲ್ಲೂಕು ವಿಚಾರ ಹೇಳುತ್ತಾರೆ, ಅವರು ತರಿಕೇರೆ ತಾಲ್ಲೂಕು ವಿಚಾರ ಹೇಳುತ್ತಾರೆ. ಇವತ್ತು ರಾಜ್ಯದಲ್ಲಿ ೫೦೦–೬೦೦ ಶಾಲಾ ಕಟ್ಟಡಗಳು ರಿಪೇರಿ ಆಗಬೇಕಾಗಿದೆ. ಇವುಗಳನ್ನು ಕಾಮಗಾರಿ ಇಲಾಖೆ ವಹಿಸಿಕೊಳ್ಳಬೇಕಾಗಿದೆ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ, ಹಣ ಒದಗಿಸುವುದು ಸರ್ಕಾರದ ಜವಾಬ್ದಾರಿ ಇದೆ. ಎಲ್ಲ ಕಟ್ಟಡಗಳಿಗೂ ಏಕಕಾಲದಲ್ಲಿಯೇ ಹಣ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕ್ರಮೇಣ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಶಾಲಾ ಕಟ್ಟಡಗಳನ್ನು ಪ್ರತಿ ವರ್ಷ ಪೆಂಟಿಯಿನ್ ಮಾಡುವ ಬಗ್ಗೆ ಕಳೆದ ಎಂಟು ವರ್ಷದಿಂದ ರಿಪೋರ್ಟು ಬಂದಿರಲಿಲ್ಲ. ಈಗ ಬಂದಿದೆ ಎಂದು ಹೇಳುತ್ತಿದ್ದಾರೆ. ರಿಪೋರ್ಟು ಬಂದಾಗ ಮಾಡುವುದಕ್ಕೆ ಬಂದಾಗ, ಪ್ರತಿ ವರ್ಷ ರಿಪೇರಿಗಾಗಿ ಹಣ ಒದಗಿಸುವ ಬಗ್ಗೆ ಯೋಜನೆ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್:—ರಿಪೇರಿಗಾಗಿ ಪ್ರತಿ ವರ್ಷವೂ ಹಣ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಕಾರಣ ನೂರಾರು ಕಟ್ಟಡಗಳು ಇರುವುದರಿಂದ ಕ್ರಮೇಣ ಹಣ ಒದಗಿಸಲಾಗುವುದೆಂದು ಭರವಸೆ ಕೊಡುತ್ತೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಸ್ಪೆಷಲ್ ರಿಪೇರಿತ ಹಣ ಒದಗಿಸಬೇಕಾಗುತ್ತದೆ. ಪ್ರತಿವರ್ಷದ ಪೆಂಟಿಯಿನ್ಸ್‌ಗೆ ಹಣ ಒದಗಿಸಿ, ಸಣ್ಣಪುಟ್ಟ ರಿಪೇರಿ ಮಾಡಿಸುವುದು ಸರ್ಕಾರದ ಆದ್ಯಕರ್ತವ್ಯ. ದಯಮಿಟ್ಟು ಸ್ಪೆಷಲ್ ರಿಪೇರಿಗೆ ಒದಗಿಸುವುದರ ಜೊತೆಗೆ, ವಾರ್ಷಿಕ ರಿಪೇರಿಗೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.